# ವಾರ್ಡ್ ನಂ: 83 ಕಾಡುಗುಡಿ ವಾರ್ಡ್‌ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 24/06/2022 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ:ಬಿ12(5)/ಪಿಆರ್/35/2020-21 ದಿನಾಂಕ: 21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೋಡಲ್ ಅಧಿಕಾರಿ, ಕಮಿಟಿಯ ಕಾರ್ಯದರ್ಶಿ, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

**ಈ ಕೆಳಕಂಡ ಅಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ**

1. ಶ್ರೀ.ಡಿ.ಎಂ.ಮುನಿರೆಡ್ಡಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಶ್ರೀಮತಿ. ಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು, ಬಿಬಿಎಂಪಿ, ಕಾಡುಗುಡಿ ವಾರ್ಡ್ ನಂ.83
4. ಶ್ರೀ.ಮಂಜುನಾಥ್, ದ್ವಿತಿಯ ದರ್ಜೆ ಸಹಾಯಕ/ವರ್ಕ್‌ಇನ್ಸ್‌ಪೆಕ್ಟರ್, ಕಾಡುಗುಡಿ ವಾರ್ಡ್ ನಂ.83
5. ಶ್ರೀ.ಅಂಜಿನಪ್ಪ, ಸಹಾಯಕ ಸಬ್‌ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ.
6. ಶ್ರೀ.ಸುರೇಶ್, ಜೆ.ಇ. ಬೆಸ್ಕಾಂ
7. ಶ್ರೀ.ನಾಗರಾಜ್, ಜೆ.ಇ. ಬೆಸ್ಕಾಂ
8. ಡಾ॥ ಭವಿಶ್ಯ, ವೈಧ್ಯರು, ಕೋವಿಡ್-19 ಆರೋಗ್ಯ ಕೇಂದ್ರ ಕಾಡುಗುಡಿ
9. ಶ್ರೀ.ವಿ.ರವಿಚಂದ್ರ, ಎ.ಇ, ರಸ್ತೆಮೂಲಭೂತ ಸೌಕರ್ಯ ವಿಭಾಗ, ಮಹದೇವಪುರ
10. ಶ್ರೀ.ಮುನಿರಾಜು, ಸಹಾಯಕ ಸಬ್‌ಇನ್ಸ್‌ಪೆಕ್ಟರ್, ಟ್ರಾಫಿಕ್ ಪೋಲೀಸ್-ವರ್ತೂರು
11. ಶ್ರೀ.ರವಿ ಕುಮಾರ್, ಎ.ಇ, ಬಿ.ಬಡ್ಲ್ಯೂ.ಎಸ್.ಎಸ್.ಬಿ
12. ಶ್ರೀ.ವೆಂಕಟೇಶ್, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ
13. ಶ್ರೀ.ಹನುಮಂತಪ್ಪ, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ

**ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ದವರು ಮತ್ತು ಸಾರ್ವಜನಿಕರು**

| | |
|---|---|
| 1. ಎಸ್.ಮಾರಪ್ಪ | 22. ಮುನೀಂದ್ರ |
| 2. ಗೋಪಾಲ್-ಗುಟ್ಟಾ | 23. ಸರ್ವಣ |
| 3. ಡಾ॥ ಸಾಯಿ ಕೀರ್ತಿ ಸುಂದರ್ | 24. ಶ್ರೀಧರ್ |
| 4. ಪುರುಷೋತಮ್ | 25. ಸಂಪಂಗಿ |
| 5. ಜಗದೀಶ್ | 26. ಗವಾಸ್ಕರ್ ನಾಯ್ಕ್ |
| 6. ಚಿರಂಜೀವಿ | 27. ಸುಮನ್ ಸೇನಾಪತಿ |
| 7. ರಾಮಸ್ವಾಮಿ | 28. ರವಿ-ಗುಟ್ಟ |
| 8. ಪತಾಂಜಲಿ | 29. ವಿನೋದ್‌ಕುಮಾರ್ ಜಗದೀಶ್ವರಿ |
| 9. ಆನಂದ ದಿನ್ನೂರು | 30. ಮುನಿಲಕ್ಷ್ಮಿ |
| 10. ರಘುನಾಥ್ | 31. ಆನಂದ್ ಕುಮಾರ್ |
| 11. ಹರ್ಷ | 32. ಗೌತಮ್ ಮಿಶ್ರ |
| 12. ಭಾಗ್ಯ | 33. ಎನ್.ಎಂ.ಗೋಪಾಲ್ |
| 13. ಎಸ್.ಕೆ.ರಮೇಶ್ | 34. ದಿಲೀಪ್ |
| 14. ಕರಗಪ್ಪ | 35. ಹನುಮಾನ ಬಾಬು |
| 15. ವಿನೋಧ್ ಕರಿಕರ್ | 36. ಉಮೇಶ್ |
| 16. ಶಿವಕುಮಾರ್ ಪಾಟೀಲ್ | 37. ರಮೇಶ್ ಬಾಬು |
| 17. ವಿಜಿಯನ್.ವಿ | 38. ಪ್ರಶಾಂತ್.ಕೆ.ವಿ |
| 18. ವೆಂಕಟೇಶ್‌ಗೌಡ | 39. ಸುರ್ದಶನ್ ರೆಡ್ಡಿ |
| 19. ನಾಗರಾಜ್‌ರೆಡ್ಡಿ | 40. ವಿಜೀಕುಮಾರ್, ದಿನ್ನೂರು |
| 20. ಹನುಮಾನ ಬಾಬು | |
| 21. ರವಿ-ಕೇಬಲ್ | |

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಸಮಿತಿಯ ಕಾರ್ಯದರ್ಶಿಗಳು, ಹಿರಿಯ ಆರೋ ನಿರೀಕ್ಷಕರು, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕ ಉಪಸ್ಥಿತಿಯಲ್ಲಿದ್ದು, ಹಿರಿಯ ಆರೋಗ್ಯ ನಿರೀಕ್ಷಕರು ಸ್ವಾಗತ ಕೋರಿದ ನಂತರ ನೋಡಲ್ ಅಧಿಕಾರಿಗ ಕಲಾಪವನ್ನು ಪ್ರಾರಂಭಿಸಲು ಸೂಚಿಸಿದರು.

1. ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.

2. ಸಭೆಯಲ್ಲಿ ಡಾ|| ಸಾಯಿ ಕೀರ್ತಿ ಸುಂದರ್ ಡಿ-ಸಿಲ್ವಾ ಬಡಾವಣೆಯಲ್ಲಿ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಕೋರಿದರು.
   - ➢ ಸದರಿ ವಿಷಯಕ್ಕೆ, ನೋಡಲ್ ಅಧಿಕಾರಿಗಳು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಕಾಮಗಾರಿಯನ್ನು ಶೀಘ್ರವಾಗಿ ನಿರ್ವಹಿಸುವುದಾಗಿ ತಿಳಿಸಿದರು.

3. ಸಭೆಯಲ್ಲಿ ಶ್ರೀ.ಮಾರಪ್ಪ ಮತ್ತು ಶ್ರೀ.ಗೋಪಾಲಪ್ಪ, ಅಂಬೇಡ್ಕರ್‌ಗುಟ್ಟ ರವರು, Emergency Control Room ತೆರೆಯುವ ಬಗ್ಗೆ ಕಳೆದ ಸಭೆಯಲ್ಲಿ ಚರ್ಚೆ ಇದ್ದು, ಇದರ ಬಗ್ಗೆ ಅಂಬೇಡ್ಕರ್‌ಗುಟ್ಟ ಪ್ರದೇಶದಲ್ಲಿ ಒಂದು Emergency Control Room ತೆರೆಯುವ ಬಗ್ಗೆ ಕೋರಿದರು.
   - ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಒಪ್ಪಿಗೆ ನೀಡಿದರು.

4. ಸಭೆಯಲ್ಲಿ ಶ್ರೀ.ಮಾರಪ್ಪ ಮತ್ತು ಶ್ರೀ.ಗೋಪಾಲಪ್ಪ, ಅಂಬೇಡ್ಕರ್‌ಗುಟ್ಟ ರವರು, ಅಂಬೇಡ್ಕರ್‌ಗುಟ್ಟ ರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಚೇಂಬರ್‌ಗಳು ರಸ್ತೆ ಮಟ್ಟಕ್ಕಿಂತ ಕೆಳಗಡೆ ಇದ್ದು, ಇವುಗಳನ್ನು ರಸ್ತೆ ಮಟ್ಟಕ್ಕೆ ತರಬೇಕೆಂದು ಹಾಗೂ ದುರಸ್ತಿಯಾದಾಗ ಸರಿಪಡಿಸಲು ಅನುಕೂಲವಾಗುವುದೆಂದು ಕೋರಿದರು.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವಿ ಕುಮಾರ್, ರವರು ಶೀಘ್ರದಲ್ಲಿ ಸರಿಪಡಿಸುವುದಾಗಿ ತಿಳಿಸಿದರು.

5. ಸಭೆಯಲ್ಲಿ ನೋಡಲ್ ಅಧಿಕಾರಿಗಳು, ಡಾ|| ಭವಿಶ್ಯ, ವೈದ್ಯರು, ಕೋವಿಡ್-19 ಆರೋಗ್ಯ ಕೇಂದ್ರ ಕಾಡುಗುಡಿ, ರವರನ್ನು ಕೋವಿಡ್-19ರ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಲು ತಿಳಿಸಿದರು,
   - ➢ ಸದರಿ ವಿಷಯಕ್ಕೆ ಡಾ|| ಭವಿಶ್ಯ ರವರು ಪ್ರಸ್ತುತ ಕೋವಿಡ್-19, ರೋಗವು ಹರಡುತ್ತಿದ್ದು, 60 ವರ್ಷ ಮೇಲ್ಪಟ್ಟವರಿಗೆ ಕಾಡುಗುಡಿ ಯು.ಪಿ.ಹೆಚ್.ಸಿ ಯಲ್ಲಿ ಕೋವಿಡ್ ಲಸಿಕೆಯನ್ನು ನೀಡುತ್ತಿದ್ದು, ಹಾಗೂ ಸಾರ್ವಜನಿಕರು ಮಾಸ್ಕ್‌ಗಳನ್ನು ಬಳಸಬೇಕೆಂದು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕೆಂದು ತಿಳಿಸಿದರು.

6. ಸಾರ್ವಜನಿಕರು ಸಭೆಯಲ್ಲಿ ವೋಟರ್ ಐ.ಡಿ. ಕಾರ್ಡ್‌ಗಳನ್ನು ವಿತರಿಸುವುದು ವಿಳಂಬವಾಗುತ್ತಿರುವ ಬಗ್ಗೆ ಕೋರಿದರು.
   - ➢ ಸದರಿ ವಿಷಯಕ್ಕೆ ಬಿಬಿಎಂಪಿ, ಕಂದಾಯ ವಸೂಲಿಗಾರರು ಪ್ರಸ್ತುತ ಕೋರಿಕೆಯು ಅಂತರ್ಜಾಲದಲ್ಲಿ ನಮೂದಿಸಬೇಕಾಗಿರುವುದರಿಂದ ಮುಂದಿನ ದಿನಗಳಲ್ಲಿ ಬೆಂಗಳೂರು ಒನ್ ಕೇಂದ್ರದಿಂದ [illegible] ನಮೂದಿಸಲು ತಿಳಿಸಿದರು.

7. ಸಭೆಯಲ್ಲಿ ಶ್ರೀ.ಕರ್ಣ, ಸಿದ್ಧಾರ್ಥ ಬಡಾವಣೆ ರವರು, ಸಿದ್ಧಾರ್ಥ ಬಡಾವಣೆಯಲ್ಲಿ ಬೋರ್‌ವೆಲ್ ರಿಪೇರಿ ಯಾಗಿದ್ದು, ಸರಿಪಡಿಸಬೇಕೆಂದು ಕೋರಿದರು.

- ಸದರಿ ವಿಷಯಕ್ಕೆ ಶ್ರೀ.ರವಿ ಕುಮಾರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಲ್ಲಿ ಬೋರ್‌ವೆಲ್ ಶಾಖೆ ಇದ್ದು, ವಿಷಯವನ್ನು ಶಾಖೆಯ ಅಭಿಯಂತರರಿಗೆ ತಿಳಿಸಲಾಗುವುದು.

8. ಸಭೆಯಲ್ಲಿ ಶ್ರೀ. ಪುರುಷೋತಮ್, ಪ್ರಶಾಂತ್ ಬಡಾವಣೆ ರವರು ಐ.ಟಿ.ಪಿ.ಎಲ್ ರಸ್ತೆಯಿಂದ ಪ್ರಶಾಂತ್ ಬಡಾವಣೆಯ ಮುಖ್ಯ ರಸ್ತೆ ದ್ವಾರದಲ್ಲಿ ಕೆಲವರು ಅನಧಿಕೃತವಾಗಿ ವಾಹನಗಳನ್ನು ನಿಲುಗಡೆ ಮಾಡಿ, ಸಾರ್ವಜನಿಕರಿಗೆ ತೊಂದರೆ ಮಾಡುತ್ತಿದ್ದು, ವಾಹನಗಳನ್ನು ತೆರವುಗೊಳಿಸಬೇಕಾಗಿ ಕೋರಿದರು.

- ಸದರಿ ವಿಷಯಕ್ಕೆ ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಪೊಲೀಸ್ ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

9. ಸಭೆಯಲ್ಲಿ ಶ್ರೀ.ಮಂಜುನಾಥ್, ದಿನ್ನೂರು, ರವರು ದಿನ್ನೂರು ಮುಖ್ಯರಸ್ತೆ - ಬಿ.ಪಿ.ಎಲ್ ರಸ್ತೆಯ ಬದಿಯಲ್ಲಿ ಅನಧಿಕೃತವಾಗಿ ವಾಹನಗಳನ್ನು ನಿಲುಗಡೆ ಮಾಡಿದ್ದು, ಅವುಗಳನ್ನು ತೆರವುಗೊಳಿಸಬೇಕೆಂದು ಕೋರಿದರು.

- ಸದರಿ ವಿಷಯಕ್ಕೆ ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಪೊಲೀಸ್ ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

10. ಸಭೆಯಲ್ಲಿ ಶ್ರೀ.ಕರ್ಣ, ಸಿದ್ಧಾರ್ಥ ಬಡಾವಣೆ ರವರು, ಸಿದ್ಧಾರ್ಥ ಬಡಾವಣೆಯಲ್ಲಿ ರೈಲ್ವೆ ಹಳಿಗಳ ಕೆಳಗಡೆ ಮ್ಯಾಜಿಕ್ ಬಾಕ್ಸ್‌ಗಳನ್ನು ಅಳವಡಿಸಬೇಕೆಂದು ತಿಳಿಸಿದರು.

- ಸದರಿ ವಿಷಯಕ್ಕೆ ಶ್ರೀ. ರವಿ, ಸಹಾಯಕ ಅಭಿಯಂತರು, ರ.ಮೂ.ಭೂ.ಸೌಕರ್ಯ ರವರು ಆ ರಸ್ತೆಯಲ್ಲಿ 03 ಸ್ವತ್ತುಗಳಿಗೆ ಟಿ.ಡಿ.ಆರ್ ನೀಡಬೇಕಾಗಿರುವುದರಿಂದ ಕಾಲವಿಳಂಭವಾಗಿರುವುದಾಗಿ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

24/6/2022

(ಎನ್ ವೆಂಕಟೇಶ್)
ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ
ವಾರ್ಡ್ ನಂ: 83 ಕಾಡುಗುಡಿ

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ